# ಆಹಾ ಸುದ್ದಿ!

★ ಸಸಿತೋಟ

ಅಲಾಸ್ಕಾದಲ್ಲಿ ಚಿನ್ನದ ಅಂಗಡಿಯಲ್ಲಿ ಜೆನುವಾ ಎಂಬಾತ 5000 ಡಾಲರ್ ಮೊತ್ತದ ಚಿನ್ನದ ನಾಣ್ಯ ಕದ್ದ. ಯಾವಾಗ ಪೊಲೀಸರು ಆತನ ಚಿತ್ರವನ್ನು ಬಿಡುಗಡೆ ಮಾಡಿದರೋ ಅಂಗಡಿಗೆ ಫೋನ್ ಮಾಡಿ ಕಾರ್ಡ್ ಮೂಲಕ ಆ ಹಣವನ್ನು ಪಾವತಿಸಿದ. ಈಗ ಪೊಲೀಸರು ಪ್ರಕರಣ ದಾಖಲಿಸಬೇಕೋ ಬೇಡವೋ ಎಂದು ಕಾನೂನಿನ ಮೊರೆ ಹೋಗಿದ್ದಾರಂತೆ. ಕಳ್ಳರು, ಅಪರಾಧಿಗಳಿಂದ ತಾನೇ ಹೊಸ ಹೊಸ ಕಾನೂನುಗಳು ಸೇರ್ಪಡೆಗೊಳ್ಳುವುದು.



ಸಿಡ್ನಿಯಲ್ಲಿ ಬೊಂಬೆಗಳ ಆಸ್ಪತ್ರೆ ಶುರುವಾಗಿದೆ. ಕೈ, ಕಾಲು, ರುಂಡ, ಕಣ್ಣು ಕಳೆದುಕೊಂಡ ಬೊಂಬೆಗಳಿಗೆ ಇಲ್ಲಿ ಸರ್ಜರಿ ಮಾಡಿ ಸರಿಪಡಿಸುತ್ತಾರಂತೆ. ಬಾಲ್ಯದಲ್ಲಿ ತುಂಟಾಟಕ್ಕೋ, ಸಹೋದರ- ಸಹೋದರಿಯರ ಕಿತ್ತಾಟಕ್ಕೋ ಗಾಯಗೊಂಡ ಬೊಂಬೆಗಳ ರಿಪೇರಿಗಾಗಿ ಈ ಆಸ್ಪತ್ರೆ ತೆರೆಯಲಾಗಿದೆಯಂತೆ. ನಾವಿನ್ನೂ ಎಲ್ಲಾ ಕಡೆ ಹೆರಿಗೆ ಆಸ್ಪತ್ರೆಗಳನ್ನೇ ತೆರೆಯಲು ಕಷ್ಟಪಡುತ್ತಿದ್ದೇವೆ, ಬೊಂಬೆಗಳ ಆಸ್ಪತ್ರೆ ತೆರೆಯುವುದು ಇನ್ನೂ ಬಹು ದೂರವಿದೆ.




ಈತ ಚೀನಾದ ಮಾನವ ಪಂಚ್‌ಬ್ಯಾಗ್ ಶಿಪಿಂಗ್. ತನ್ನ ಹಿಂದೆ ಗೆರೆಯೊಂದನ್ನು ಎಳೆದು ನಿಂತುಕೊಳ್ಳುತ್ತಾನೆ. ಹಣ ಕೊಟ್ಟು ಮೂರು ಬಾರಿ ಆತನ ಹೊಟ್ಟೆಗೆ ಹೊಡೆಯಲು ಅವಕಾಶ. ಆತ ಏನಾದರೂ ಗೆರೆಯಾಚೆ ಕಾಲಿಟ್ಟರೆ ಹಣ ವಾಪಸ್. ಕಳೆದ 13 ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚ ಸಲ ಹೊಡೆಸಿಕೊಂಡ ಶಿಪಿಂಗ್ ಒಂದು ಬಾರಿ ಮಾತ್ರ ಸೋತಿದ್ದಾನಂತೆ. ಬೆಟಿಂಗ್ ವೈವಿಧ್ಯಗಳಿಗೆ ಒಳ್ಳೆಯ ಸೇರ್ಪಡೆ.



ಅಮೆರಿಕಾದ ಥಾಮ್ಸನ್ ಕುಟುಂಬದ ಈ ಹಳೆಯ ಕ್ಯಾಡಿಲಾಕ್ ಕಾರು ಒಟ್ಟು 38 ಸಾವಿರ ನಾಣ್ಯಗಳನ್ನು ಮೈ ತುಂಬ ಹೊದ್ದುಕೊಂಡಿದೆ. ಒಂದು ಸೆಂಟ್ ನಾಣ್ಯಗಳನ್ನು ಸುಮಾರು ವರ್ಷಗಳಿಂದ ಸಂಗ್ರಹಿಸುತ್ತಿದ್ದ ಕುಟುಂಬ ಈಗ ಈ ಅಲಂಕಾರ ಮಾಡಿದೆ. ನಾಣ್ಯಗಳ ಒಟ್ಟು ಮೌಲ್ಯ ಕೇವಲ 82 ಡಾಲರ್ ಅಂತೆ. ಬೀದಿಯಲ್ಲಿ ನಿಲ್ಲಿಸಿದರೂ ಯಾವ ಕಳ್ಳನೂ ಕೈ ಹಾಕಲಾರ.




ಟೋಕಿಯೋದ ಈ ವ್ಯಕ್ತಿಯ ಹೆಸರೇ ಮೆಂಜೆತ್ಸು- ಮ್ಯಾನ್. ಅಂದರೆ ಹುಣ್ಣಿಮೆಯ ಚಂದ್ರ ಅಂತೆ. ಸ್ಪೈಡರ್‌ಮ್ಯಾನ್ ಮತ್ತಿತರ ಸೂಪರ್‌ಹೀರೋಗಳು ಅಪರಾಧಿಗಳ ವಿರುದ್ಧ ಹೋರಾಟ ನಡೆಸಿದರೆ ಈತನ ಹೋರಾಟ ಕಸದ ವಿರುದ್ಧ. ಈತನ ಆಯುಧಗಳೆಂದರೆ ಪೊರಕೆ ಮತ್ತು ಡಸ್ಟ್ ಪ್ಯಾನ್. ಟೋಕಿಯೋದಲ್ಲೂ ಕಸ, ಧೂಳು ಇವೆ ಅಂತಾಯ್ತು.

ಪೆರೋಲ್ ಉಲ್ಲಂಘಿಸಿದ ಅಮೆರಿಕಾದ ಅಪರಾಧಿಯೊಬ್ಬನನ್ನು ಐಸ್ ಬಕೆಟ್ ಚಾಲೆಂಜ್ ಹುಡುಕಿಕೊಟ್ಟಿದೆ. ಮೋರಿಸ್ ಎಂಬಾತ ಪೆರೋಲ್ ಮೇಲೆ ಬಿಡುಗಡೆಯಾಗಿದ್ದು, ಅವಧಿ ಮುಗಿದ ನಂತರವೂ ಪೊಲೀಸರಿಗೆ ಶರಣಾಗದೇ ತಪ್ಪಿಸಿಕೊಂಡು ಓಡಾಡುತ್ತಿದ್ದನಂತೆ. ಗೆಳೆಯನೊಬ್ಬನಿಂದ ಐಸ್ ಬಕೆಟ್ ಸವಾಲು ಸ್ವೀಕರಿಸಿ ತಲೆಯ ಮೇಲೆ ಸುರಿದುಕೊಂಡ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಹಾಕಿದ. ಫೇಸ್‌ಬುಕ್ ಗೆಳೆಯರ ಪಟ್ಟಿಯಲ್ಲಿದ್ದ ಅಷ್ಟೊಂದು ಗೆಳೆಯನಲ್ಲದವನೊಬ್ಬ ಪೊಲೀಸರಿಗೆ ಮೋರಿಸ್ ಬಗ್ಗೆ ತಿಳಿಸಿದನಂತೆ. ಮೋರಿಸ್ ಫೇಸ್‌ಬುಕ್‌ನಲ್ಲಿ ಫೇಸ್ ಮಾತ್ರ ಹಾಕಬಾರದಿತ್ತು.